**ಸಾಕ್ಷಿಗೆ ದಿನಾಂಕ 09.04.2026 ರಂದು ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ಹುಣಸೂರಿನ ಗ್ರಾಮಾಂತರ ಪೊಲೀಸ್ ಠಾಣೆ ಹಾಗೂ ಉಪನೊಂದಾಣಾಧಿಕಾರಿ ಕಛೇರಿಯಲ್ಲಿ ಸಿ.ಸಿ. ಟಿವಿ ಇದೆ ಎಂದರೆ ಸರಿ. ದಿಃ06.06.2016 ಹಾಗೂ 19.09.2016 ರ ದಿನಾಂಕಗಳಲ್ಲಿ ನಾನು ಸದರಿ ಕಛೇರಿಗೆ ಹೋದ ಬಗ್ಗೆ ದಾಖಲೆ ಇಲ್ಲ ಎಂದರೆ ಸಾಕ್ಷಿ ಸಿ.ಸಿ.ಟಿವಿ ಸರಿಯಾಗಿ ಇದಿಯೋ ಇಲ್ಲವೋ ನನಗೆ ಗೊತ್ತಿಲ್ಲ. ವಾದಿ ಹುಡುಗನ ಜೊತೆ ಹೋದ ಬಗ್ಗೆ ರಾಜಿ ಪಂಚಾಯಿತಿ ಆಗಿತ್ತು ಎಂದರೆ ಸರಿ. ವಾದಿ ಕಾಣೆಯಾದ ಬಗ್ಗೆ ಠಾಣೆಯಲ್ಲಿ ದೂರು ದಾಖಲಾಗಿತ್ತು ಎಂದರೆ ಸರಿ. ರಾಜಿ ಪಂಚಾಯಿತಿ ಸಮಯದಲ್ಲಿ ವಿಡಿಯೋ ಚಿತ್ರೀಕರಣ ಮಾಡಿದ್ದರು ಎಂದರೆ ವಿಡಿಯೋದಲ್ಲಿ ನಾನು ಇದ್ದಿನೋ ಇಲ್ಲವೋ ಗೊತ್ತಿಲ್ಲ ರಾಜಿ ಪಂಚಾಯಿತಿಯಲ್ಲಿ ನಾನು ಇದ್ದೇನು ಎಂದು ನುಡಿಯುತ್ತಾರೆ. ರಾಜಿ ಪಂಚಾಯಿತಿಯಲ್ಲಿ ನಾನು ಸೇರಿದ್ದೇನು ಎಂದು ತೋರಿಸಲು ದಾಖಲೆಗಳು ಇಲ್ಲ ರಾಜಿ ಪಚಾಯಿತಿಯಲ್ಲಿ ನಾನು ಸಹಿ ಮಾಡಿಲ್ಲ. ನಿಪಿ-6 ರ ದಾಖಲೆಗೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿಲ್ಲ ಎಂದರೆ ಸರಿ. ಹಕ್ಕು ಖುಲಾಸೆ ಪತ್ರಕ್ಕೆ ನಾನು ಸಹಿ ಮಾಡಿಲ್ಲ ಎಂದರೆ ಸರಿ. ಹಕ್ಕು ಖುಲಾಸೆ ಪತ್ರದ ಸಾಕ್ಷಿದಾರರು ನನಗೆ ಪರಿಚಯಸ್ಥರು. ನಾನು ರಾಜಿ ಪಂಚಾಯಿತಿಯಲ್ಲಿ ಹಾಗೂ ವಾದಿಯೋಂದಿಗೆ ಮದುವೆ ನೊಂದಣಿ ಆಗುವ ಸಮಯದಲ್ಲಿ ಹಾಜರಿರಲಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿ ಯಾವ ವಿಚಾರಕ್ಕಾಗಿ ಪ್ರತಿವಾದಿಗೆ ನೋಟೀಸ್ ನೀಡಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸದರಿ ನೋಟೀಸ್ ನಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ವಾದಿ ಮದುವೆಯ ಸಮಯದಲ್ಲಿ ಪ್ರತಿವಾದಿಯಿಂದ 5 ಲಕ್ಷ ಹಣ ಪಡೆದುಕೊಂಡ ಬಗ್ಗೆ ನನಗೆ ಗೊತ್ತು ಎಂದರೆ ಸರಿಯಲ್ಲ ಸಾಕ್ಷಿ ಹಣ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ವಾದಿ ಮದುವೆಯ ಪೂರ್ವದಲ್ಲಿ 100 ಗ್ರಾಂ ಚಿನ್ನ, ವಾಚ ಹಾಗೂ ಒಂದು ಚಿನ್ನದ ಸರವನ್ನು ತೆಗೆದುಕೊಂಡ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ ಯಾವುದೇ ಬಂಗಾರ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ವಾದಿ ಪ್ರತಿವಾದಿಯ ಒಟ್ಟು ಕುಟುಂಬದ

ಸ್ವತ್ತುಗಳಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದು ಉಪನೊಂದಣಾಧಿಕಾರಿ ಕಛೇರಿಯಲ್ಲಿ ದಾಖಲೆ ಬರೆದು ಕೊಟ್ಟಿರುತ್ತಾರೆ ಆ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. ವಾದಿ ಬಿ.ಕಾಂ ಪದವಿ ಧರಳು. ವಾದಿಗೆ ಕನ್ನಡ ಓದಲು ಬರೆಯಲು ಬರುತ್ತದೆ ಎಂದರೆ ಸರಿ. ವಾದಿಯ ಮನೆಯ ಹಿಂಭಾಗದಲ್ಲಿ ಪ್ರತಿವಾದಿಯ ಮನೆ ಇದೆ ಎಂದರೆ ಸರಿ. ವಾದಿಯ ಕಷ್ಟ ಸುಖಕ್ಕೆ ಆಕೆಯ ತಂದೆ ತಾಯಿ ನೆರವಾಗುತ್ತಾರೆ ಎಂಬ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. ವಾದಿ ನನ್ನ ಅಣ್ಣನ ಹೆಂಡತಿಯ ಅಕ್ಕನ ಮಗಳು. ನಾವು ವಾದಿಯ ಮನೆಗೆ ಹೋಗಿ ಬಂದು ಮಾಡುತ್ತೇವೆ ಎಂದರೆ ಸರಿಯಲ್ಲ.

ನಾನು ವಾದಿಯಿಂದ 2 ಲಕ್ಷ ಸಾಲ ಪಡೆದುಕೊಂಡಿದ್ದು ಆಗಾಗಿ ವಾದಿಯ ಪರವಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಮುಖ ವಿಚಾರಣಾ ಪ್ರಮಾಣ ಪತ್ರ ಬರೆಯಲು ನಾನು ಮಾಹಿತಿ ಕೊಟ್ಟಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

**ಓ.ಹೇ.ಕೇ.ಸರಿ ಇದೆ**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಹುಣಸೂರು.**